# ‘ಮತ್ತೆ ಮತ್ತೆ ಶಿವ ಆವರಿಸುತ್ತಿದ್ದಾನೆ



**ಅರ್ಜುನ್ ರಮೇಶ್**
**ಸ್ಟಾರ್ ಸುವರ್ಣದ ‘ಶ್ರೀದೇವಿ ಮಹಾತ್ಮೆ’ಯ ಶಿವ**

◆ **ನಿಮಗೂ ಶಿವನ ಪಾತ್ರಕ್ಕೂ ಯಾಕಿಷ್ಟು ನಂಟು?**

ಮತ್ತೆ ಮತ್ತೆ ಶಿವನ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದೇನೆ. ಅದನ್ನು ಅವಲೋಕಿಸಿದರೆ ಇಂತಹ ಒಳ್ಳೆಯ ಪಾತ್ರ ನನ್ನನ್ನೇ ಹುಡುಕಿಕೊಂಡು ಬರುತ್ತಿದೆ ಎಂಬ ಹೆಮ್ಮೆ ನನ್ನಲ್ಲಿ ಮೂಡುತ್ತದೆ. ಇದುವರೆಗೆ ಮೂರು ಧಾರಾವಾಹಿಗಳಲ್ಲಿ ಶಿವನಾಗಿದ್ದೇನೆ. ಯಾವತ್ತೂ ನಾನಾಗಿಯೇ ಮಾಡುತ್ತೇನೆ ಎಂದು ಹೋದವನಲ್ಲ. ‘ಶನಿ’ಯಲ್ಲಿ ಮೊದಲು ಶಿವನಾಗಿದ್ದೆ. ನಂತರ ಅದೇ ವಾಹಿನಿಯಲ್ಲಿ ‘ಮಹಾಕಾಳಿ’ಗೆ ಕರೆಸಿಕೊಂಡರು. ಅದಕ್ಕಾಗಿ ಆಡಿಷನ್ ಕೂಡ ಕೊಡಲಿಲ್ಲ. ಅದು ಮುಗಿಯಿತು ಎನ್ನುವಷ್ಟರಲ್ಲಿ ‘ಅಗ್ನಿಸಾಕ್ಷಿ’ಗೆ ಕರೆದರು. ಅದಾದ ಮೇಲೆ ‘ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ’ಕ್ಕೆ ರಾವಣನ ಪಾತ್ರವನ್ನು ಮಾಡಲು ಬಂದಿದ್ದೆ. ಆಗ ಖಳನಾಯಕನ ಪಾತ್ರವನ್ನು ದೀರ್ಘ ಮತ್ತು ಸೂಕ್ಷ್ಮವಾಗಿ ಚಿತ್ರಿಸುವುದಾಗಿ ಹೇಳಿದ್ದರು. ಒಂದೇ ತಿಂಗಳಲ್ಲಿ ಆ ಪಾತ್ರ ಮುಗಿಯುತ್ತದೆ. ಅದಾಗಿ ಒಂದೇ ವಾರಕ್ಕೆ ಮತ್ತೆ ನನ್ನನ್ನು ಕರೆಸಿದರು. ಶಿವನ ಗೆಟಪ್ ಹಾಕಿ ಆಡಿಷನ್ ಕೊಡಲು ಹೇಳಿದರು. ‘ಶ್ರೀದೇವಿ ಮಹಾತ್ಮೆ’ಗೆ ಶಿವನಾಗಿ ಹಾಕಿಕೊಳ್ಳಲೆಂದೇ ರಾವಣನ ಪಾತ್ರ ಮುಗಿಸಿದ್ದು ಎಂದು ಆಗ ಗೊತ್ತಾಯಿತು. ಇದೆಲ್ಲ ನೆನಪಿಸಿದರೆ ತುಂಬ ಖುಷಿ ಆಗುತ್ತದೆ.

◆ **ಪೌರಾಣಿಕ ಅದ್ದೂರಿ ಧಾರಾವಾಹಿ ನಂತರ ಸಾಮಾಜಿಕ ಕಥೆಯ ಸಾಮಾನ್ಯ ಪಾತ್ರ ಎದುರಾದಾಗ ಪರಿಸ್ಥಿತಿ ಹೇಗಿರುತ್ತದೆ?**

ಮೇಕಪ್ ತೆಗೆದ ಮೇಲೆ ನಿರ್ದೇಶಕರೇ ನನ್ನನ್ನು ಗುರುತಿಸುವುದಿಲ್ಲ. ಹೊರಗಡೆ ಇನ್ನೂ ಗೊತ್ತಾಗುವುದಿಲ್ಲ. ಅಷ್ಟರಮಟ್ಟಿಗೆ ನಾನು ಭಿನ್ನವಾಗಿದ್ದೇನೆ. ಯಾವುದೇ ಪಾತ್ರ ಮಾಡಬಲ್ಲೆ. ನಟನೆಗೆ ಇದೇ ಆಗಬೇಕು ಎನ್ನುವುದಿಲ್ಲ. ವೀಕ್ಷಕರ ಮನಗೆಲ್ಲುವಂತೆ ನಟಿಸಬೇಕು. ಪೌರಾಣಿಕ ಹಿನ್ನೆಲೆಯ ಇಂತಹ ಪಾತ್ರಗಳು ನನ್ನಲ್ಲಿ ಅನೇಕ ಬದಲಾವಣೆಯನ್ನು ಮೂಡಿಸಿದೆ. ನನ್ನ ಭಾಷೆ, ನಡವಳಿಕೆಯಲ್ಲಿ ಪರಿವರ್ತನೆ ಆಗಿದೆ. ಶಿವನ ಪಾತ್ರ ದೊಡ್ಡ ಶಕ್ತಿಯನ್ನು ಕೊಟ್ಟಿದೆ. ಇದರ ಜೊತೆ ‘ಜಂಟಲ್‌ಮನ್’ ಸಿನಿಮಾದಲ್ಲಿ ವಿಲನ್ ಪಾತ್ರವನ್ನು ಮಾಡಿದ್ದೇನೆ. ಏನೇ ಇದ್ದರೂ ಶಿವನ ಪಾತ್ರಕ್ಕೆ ಯಾವತ್ತೂ ಹಿಂದೇಟು ಹಾಕಿಲ್ಲ. ಇದು ತುಂಬ ಕಷ್ಟದ ಕೆಲಸ. ಏಕೆಂದರೆ, ಮೇಕಪ್ ಮಾಡಿ ಕಾಸ್ಟ್ಯೂಮ್ ಹಾಕಲು ಸುಮಾರು ಎರಡು ಗಂಟೆ ಸಮಯ ಹಿಡಿಯುತ್ತದೆ. ಆ ಪರಿಕರಗಳನ್ನು ಧರಿಸಿ ಪಾತ್ರ ನಿರ್ವಹಿಸುವುದು ಸರಳ ಸಂಗತಿಯಲ್ಲ.

◆ **ಅಭಿನಯ ನಿಮ್ಮ ಸಂಗಾತಿ ಆಗಿದ್ದು ಹೇಗೆ?**

ಥಿಯೇಟರ್ ಹಿನ್ನೆಲೆ ಇಲ್ಲ. ಇದಕ್ಕಾಗಿ ಯಾವುದೇ ತರಗತಿ, ತರಬೇತಿಯನ್ನೂ ತೆಗೆದುಕೊಂಡ ವ್ಯಕ್ತಿ ನಾನಲ್ಲ. ನಾನು ವಿಷ್ಣುವರ್ಧನ್ ಅಭಿಮಾನಿ. ಚಿಕ್ಕವನಿದ್ದಾಗ ಅವರ ಸಿನಿಮಾವನ್ನು ನೋಡಿ ಕನ್ನಡಿ ಮುಂದೆ ನಿಂತು ಅನುಕರಣೆ ಮಾಡುತ್ತಿದ್ದೆ. ಏಕೆಂದರೆ ಆಗ ನನಗೂ ಅವರ ಹಾಗೇ ನಟ ಆಗಬೇಕು ಎನ್ನುವ ಆಸೆ ಇತ್ತು. ದೊಡ್ಡವನಾದಂತೆ ರಾಜಕೀಯದಲ್ಲಿ ಬೆಳೆಯಬೇಕು ಎನ್ನುವ ಆಸೆ ಹುಟ್ಟಿತು. ನನ್ನ ತಂದೆ ಕೂಡ ಅದನ್ನೇ ಬಯಸಿದ್ದರು. ನನಗೂ ಅಭಿನಯ ಕ್ಷೇತ್ರಕ್ಕೂ ಸಂಬಂಧವೇ ಇಲ್ಲ. ಮಾತ್ರವಲ್ಲ ಯಾವತ್ತೂ ನಟ ಆಗುತ್ತೇನೆ ಎಂದು ಭಾವಿಸಿರಲಿಲ್ಲ. ಮನೆಯಲ್ಲಿ ಕುಳಿತಿದ್ದವನಿಗೆ ಸಿನಿರಂಗ ಕರೆದುಕೊಂಡು ಬಂದಿದೆ. ಬಿಡುವು ಇಲ್ಲದಂತೆ ಕೆಲಸವನ್ನು ಕೊಟ್ಟಿದೆ. ನಿರಂತರವಾಗಿ ಕೆಲಸ ಮಾಡುತ್ತಲೇ ಇದ್ದೇನೆ. ಪೌರಾಣಿಕ ಕಥೆಗಳು ಜನರಿಗೆ ಮುಟ್ಟಿದರೆ ಮಾತ್ರ ಸಾರ್ಥಕ ಎಂದು ನಾನು ಅಂದುಕೊಂಡಿದ್ದೇನೆ.

◆ **ರಾಜಕೀಯದಲ್ಲಿ ಬೆಳೆಯುವ ಅವಕಾಶ ಸಿಕ್ಕರೆ ಏನು ಮಾಡ್ತೀರಿ?**

ಸಮಾಜಮುಖಿಯಾಗಿ ಕೆಲಸ ಮಾಡಬೇಕು ಎನ್ನುವ ಕನಸಿದೆ. ಅಧಿಕಾರವನ್ನು ಹುಡುಕಿಕೊಂಡು ನಾನು ಹೋಗುವುದಿಲ್ಲ. ಒಳ್ಳೆಯ ಜನ ಸೇವಕ ಆಗಬೇಕು ಎನ್ನುವುದು ನನ್ನ ಕಲ್ಪನೆ. ಆ ನಿಟ್ಟಿನಲ್ಲಿ ಕೆಲಸ ಇದ್ದೇ ಇರುತ್ತದೆ. ಯಾವುದನ್ನೂ ನಿರೀಕ್ಷೆ ಇಟ್ಟುಕೊಂಡು ಏನನ್ನೂ ಮಾಡುವುದಿಲ್ಲ. ಹಾಗೇನಾದರೂ ಅವಕಾಶ ಸಿಕ್ಕರೆ, ಯೋಗ್ಯ ಜನಪ್ರತಿನಿಧಿಯಾಗಿ ಬದುಕಬೇಕು ಎನ್ನುವುದು ನನ್ನ ಆಸೆ. ಅಂತಹ ಯೋಗ ಬಂದರೆ ಖಂಡಿತ ಖುಷಿ ಆಗುತ್ತದೆ. ಈಗ ಶಿವನ ಪಾತ್ರಕ್ಕೆ ಹೇಗೆ ಅರ್ಪಣಾ ಮನೋಭಾವದಿಂದ ಕೆಲಸ ಮಾಡುತ್ತಿದ್ದೇನೋ ಅದೇ ಶ್ರದ್ಧೆಯನ್ನು ರಾಜಕಾರಣದಲ್ಲಿಯೂ ತೋರಿಸುತ್ತೇನೆ ಇದಕ್ಕೆ ಅನುಮಾನವೇ ಇಲ್ಲ.

◆ **ಸಿನಿಮಾದ ಬಗ್ಗೆ ನಿಮ್ಮ ನಿಲುವು ಏನು?**

‘ಕೌಟಿಲ್ಯ’ ಸಿನಿಮಾದಲ್ಲಿ ನಾಯಕನಾಗಿ ಕೆಲಸ ಮಾಡಿದೆ. ಸಾಧಾರಣ ಪ್ರತಿಕ್ರಿಯೆ ಬಂತು. ಹೊಸಬರ ಸಿನಿಮಾವನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವುದು ಗೊತ್ತಿರುವ ಸಂಗತಿ. ನನ್ನ ಸಿನಿಮಾ ಪಯಣ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ. ಭವಿಷ್ಯದಲ್ಲಿ ಒಳ್ಳೆಯ ಸಿನಿಮಾ ಮಾಡಬೇಕು ಎಂದುಕೊಂಡಿದ್ದೇನೆ. ಬೆರಳೆಣಿಕೆಯ ಸಿನಿಮಾ ಮಾಡಿದರೂ ಜನರ ಮನಸ್ಸಿನಲ್ಲಿ ನೆಲೆಸುವಂತಹ ಸಿನಿಮಾ ಮಾಡಬೇಕು. ಅಂತಹ ಸವಾಲಿನ ಪಾತ್ರಗಳನ್ನು ನಿರೀಕ್ಷೆ ಮಾಡುತ್ತಿರುವೆ.

■ ರಾಘವೇಂದ್ರ ಕೆ.